ಏನಾಗಿದೆ ಎಂದರೆ ಸೆಕ್ಷನ್ 64 ಪ್ರಕಾರ ವಿಚಾರಣೆ ಮಾಡಿದ ಮೇಲೆಯೇ ನಾವು ರದ್ದು ಮಾಡಬೇಕಾಗುತ್ತದೆ. ಯಾವುದೇ ಸಂಘವನ್ನು ಸುಮ್ಮನೇ ಹೋಗಿ ರದ್ದು ಮಾಡಿದರೆ, ಅವರು ಹೈಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ. ಆ ಕಾರಣದಿಂದ ಸೆಕ್ಷನ್ 64ನ್ನು ನಾವು ಇನ್‌ಪಿಯೇಟ್ ಮಾಡಿ, ಎನ್‌ಕ್ವೇರಿ ಮಾಡಿ ಎಂದು ಅವರಿಗೆ ಕಳುಹಿಸಿದೆವು. ವಿಚಾರಣಾ ವರದಿಯೂ ಬಂತು. ದುರ್ದೈವದಿಂದ ಅವರು ಅಡಿಷನಲ್ ಚಾರ್ಜ್ ಏನಿದ್ದಾರೆ, ಆ ಗ್ರೌಂಡ್ ಮೇಲೆ ಇವನಿಗೆ ಅಧಿಕಾರ ಇಲ್ಲ ಎಂದು ಸ್ಟೇ ಕೊಟ್ಟಿದೆ ಅದಕ್ಕೆ ಒಬ್ಬ ಯೋಗ್ಯ ಅಧಿಕಾರಿಯನ್ನು ಹೊರಗಿನಿಂದಲೇ ಕಳುಹಿಸಿ, ಅದನ್ನು ಎನ್‌ಕ್ವೈರಿ ಮಾಡಿಸಿ, ಅವನು ಯಾವ ಪಕ್ಷದವನ ಏನು ಎಂದು, ಅವನು ಮೂತಿ ನೋಡುವುದಿಲ್ಲ. ಖಂಡಿತವಾಗಿಯೂ, ಅದರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇನೆ.

(2) ಸರ್ಕಾರಿ ಸ್ವಾಮ್ಯದ ರೇಷ್ಮೆ ಕಾರ್ಖಾನೆಗಳು ಮುಚ್ಚುವ ಹಂತ ತಲುಪಿರುವುದರಿಂದ, ಕಾರ್ಮಿಕರಿಗೆ ಹಾಗೂ ರೇಷ್ಮೆ ಬೆಳೆಗಾರರಿಗೆ ಉಂಟಾಗಿರುವ ತೊಂದರೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಅಧ್ಯಕ್ಷರೇ, ಸರ್ಕಾರಿ ಸ್ವಾಮ್ಯದ ರೇಷ್ಮೆ ಕಾರ್ಖಾನೆಗಳು ಮುಚ್ಚುವ ಹಂತ ತಲುಪಿರುವುದರಿಂದ, ಕಾರ್ಮಿಕರಿಗೆ ಹಾಗೂ ರೇಷ್ಮೆ ಬೆಳೆಗಾರರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ರೇಷ್ಮೆ ರಾಜ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ರೈಷ್ಮೆ ಇಲಾಖೆಯ ಆಡಳಿತ ನಿಯಂತ್ರಣದಲ್ಲಿ ನಾಲ್ಕು ರೇಷ್ಮೆ ನೂಲು ಬಿಚ್ಚುವ ಕಾರ್ಖಾನೆಗಳು ಮತ್ತು ಒಂದು ರೇಷ್ಮೆ ಹುರಿ ಮತ್ತು ನೇಯ್ಗೆ ಕಾರ್ಖಾನೆ ಇರುತ್ತದೆ. ಇವುಗಳಲ್ಲಿ ತಲಾ 50 ಬೇಸಿನ್‌ಗಳನ್ನು ಪ್ರಾರಂಭಿಸಲು ವಿಷಯ ಸಮಿತಿ ಮತ್ತು ಸಮನ್ವಯ ಸಮಿತಿ ಶಿಫಾರಸ್ಸು ಮಾಡಿರುತ್ತವೆ.

ಸರ್ಕಾರಿ ರೇಷ್ಮೆ ಕಾರ್ಖಾನೆಗಳಲ್ಲಿ ಕಾರ್ಮಿಕರ ನಿವೃತ್ತಿಯಿಂದ: ಮರಣದಿಂದ ಅನೇಕ ಹುದ್ದೆಗಳು ಖಾಲಿ ಇದ್ದು ಆರ್ಥಿಕ ಮಿತವ್ಯಯಗಳು ಜಾರಿಯಲ್ಲಿರುವುದರಿಂದ ಆ ಹುದ್ದೆಗಳನ್ನು ತುಂಬಲು ಅವಕಾಶವಿಲ್ಲದಂತಾಗಿದೆ. ಇದರಿಂದ ಅನೇಕ ಬೇಸಿನ್‌ಗಳು ಕಾರ್ಯ ನಿರ್ವಹಿಸದೇ ಸ್ಥಗಿತವಾಗಿರುತ್ತವೆ. ಕಾರ್ಮಿಕರ ಸೇವಾ ಸವಲತ್ತುಗಳು ಇತರ ರಾಜ್ಯ ಸರ್ಕಾರಿ ನೌಕರರ ಸೇವಾ ಸವಲತ್ತುಗಳಿಗೆ ಸಮನಾಗಿರುವುದರಿಂದ ವೇತನ ಮತ್ತು ಭತ್ಯಗಳಿಗೆ ತಗಲುತ್ತಿರುವ ವೆಚ್ಚವೇ ಅಧಿಕವಾಗಿರುತ್ತದೆ. ಇದರಿಂದ ಸರ್ಕಾರಿ ರೇಷ್ಮೆ ಕಾರ್ಖಾನೆಗಳಲ್ಲಿ ಉತ್ಪಾದಿಸಲ್ಪಡುವ ರೇಷ್ಮೆಯ ಉತ್ಪಾದನಾ ವೆಚ್ಚವು ತುಂಬ ಅಧಿಕಾರವಾಗಿರುತ್ತದೆ. ಸರ್ಕಾರಿ ರೇಷ್ಮೆ ಕಾರ್ಖಾನೆಗಳಲ್ಲಿ ಉತ್ಪಾದಿಸಲ್ಪಡುವ ರೇಷ್ಮೆಯ ಪ್ರಮಾಣವು ರಾಜ್ಯದ ರೇಷ್ಮೆಯ ಶೇಕಡ 2 ರಷ್ಟು ಇರುತ್ತದೆ.

ರೇಷ್ಮೆ ಬೆಳೆಗಾರರ ಹಿತಾಸಕ್ತಿಯನ್ನು ಕಾಪಾಡಲು ಅನುವಾಗುವಂತೆ ಸರ್ಕಾರಿ ರೇಷ್ಮೆ ಕಾರ್ಖಾನೆಗಳನ್ನು ಮುಂದುವರೆಸಿಕೊಂಡು ಹೋಗುವುದು ಅವಶ್ಯಕವೆಂದು ಮನಗಂಡಿತ್ತು. ಆದರೆ ಇವುಗಳನ್ನು ನಷ್ಟದಲ್ಲಿಯೇ ನಡೆಸುವುದು ಸರ್ಕಾರಕ್ಕೆ ಭಾರವಾಗಿರುತ್ತದೆ. ಆದ್ದರಿಂದ ಸರ್ಕಾರಿ ರೇಷ್ಮೆ ಕಾರ್ಖಾನೆಗಳನ್ನು ಲಾಭ ಮತ್ತು ನಷ್ಟವಿಲ್ಲದಂತೆ ನಡೆಸಿಕೊಂಡು ಹೋಗಲು ಯೋಚಿಸಿ ಪ್ರತಿ ಕಾರ್ಖಾನೆಗಳನ್ನು ಲಾಭ ಮತ್ತು ನಷ್ಟವಿಲ್ಲದಂತೆ ನಡೆಸಿಕೊಂಡು ಹೋಗಲು ಯೋಚಿಸಿ

ಪ್ರತಿ ಕಾರ್ಖಾನೆಯಲ್ಲಿ 30 ಬೇಸಿನ್‌ಗಳನ್ನು ಹೆಚ್ಚುವರಿಯಾಗಿ ಗುತ್ತಿಗೆ ಆಧಾರದ ಮೇಲೆ ಪ್ರಾರಂಭಿಸಲು ಆರ್ಥಿಕ ಸಂಪನ್ಮೂಲಗಳ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಲಾಗಿ ಆ ಇಲಾಖೆಯು ಪ್ರಸ್ತಾವನೆಯನ್ನು ತಿರಸ್ಕರಿಸಿ ಸರ್ಕಾರಿ ರೇಷ್ಮೆ ಫಿಲೇಚರ್ ಘಟಕಗಳನ್ನು ಮುಚ್ಚುವ ಬಗ್ಗೆ ಪರಿಶೀಲಿಸುವಂತೆ ಸಲಹೆ ಮಾಡಿದೆ.

ಶ್ರೀ ಟಿ.ಬಿ. ಜಯಚಂದ್ರ: ಸಭಾಧ್ಯಕ್ಷರೇ ಸನ್ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರ ನನಗೆ ಸಮಾಧಾನವನ್ನು ತಂದಿಲ್ಲ. ಇದರ ಬಗ್ಗೆ ಸ್ವಲ್ಪ ಯೋಜನೆ ಮಾಡಬೇಕೆಂಬುದನ್ನು ಕೇಳುತ್ತಾ, ಒಂದು ವಿಷಯವನ್ನು ಪ್ರಾಮುಖ್ಯರಾಗಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ರೇಷ್ಮೆ ಬೆಲೆ ಸ್ಥಿರೀಕರಣ ನಿಧಿ ಎಂದು ತಮ್ಮ ಇಲಾಖೆಯ ಸಮಗ್ರ ಯೋಜನೆಗೋಸ್ಕರ ಸುಮಾರು 28 ಕೋಟಿ ರೂಪಾಯಿಗಳು ನಿಮ್ಮ ಹತ್ತಿರ ಇದೆ. ಆದರಲ್ಲಿ ಒಂದು ರೂಪಾಯಿ ಸಹಿತ ನೀವು ಖರ್ಚುಮಾಡಿಲ್ಲ. ಅದನ್ನು ಏತಕ್ಕೋಸ್ಕರ ಇಟ್ಟುಕೊಂಡಿದ್ದೀರಿ? ಈಗಾಗಲೇ ಈ ಕೈಗಾರಿಕೆಗಳೆಲ್ಲಾ ಮುಚ್ಚಿಹೋಗತಕ್ಕ ಪ್ರಶ್ನೆಯಾಗಿದೆ. 1956ನೇ ಇಸವಿಯಲ್ಲಿ ನೀವು ಕಾರ್ಖಾನೆ ಪ್ರಾರಂಭ ಮಾಡಿದಂಥ ಸಂದರ್ಭದಲ್ಲಿ 2,200 ಜನ ಇದ್ದಂಥವರು, ಇವತ್ತು ಕೇವಲ 300 ಜನಕ್ಕೆ ಬಂದಿದ್ದಾರೆ. ಇದರಿಂದ ಏನಾಗಿದೆಯೆಂದರೆ, ರೈತ ರೇಷ್ಮೆ ಬೆಳೆಯ ಗೂಡನ್ನು ಮಾರುವುದಕ್ಕೆ ಹೋದಂಥ ಸಂದರ್ಭದಲ್ಲಿ ರೈತನಿಗೆ ಸರಿಯಾದಂಥ, ಸಮರ್ಪಕವಾದಂಥ ಬೆಲೆ ಇಲ್ಲ, ಫಿಲೇಚರ್ ಹೋಗದೇ ಇದ್ದುದರಿಂದ. ಇವತ್ತು ಕಾರ್ಮಿಕರಿಗೂ ತೊಂದರೆಯಾಗಿದೆ. ಇದರ ವಿಷಯದಲ್ಲಿ ಹೆಚ್ಚುಸಾರಿ ಪ್ರಸ್ತಾಪವಾಗಿದೆಯೆಂದರೆ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ 1983 ರಲ್ಲಿ ಒಂದು ಶಿಫಾರಸ್ಸನ್ನು ಕೊಟ್ಟರು, 1994ರಲ್ಲಿ ಸಮನ್ವಯ ಸಮಿತಿಯಲ್ಲಿ ಶಿಫಾರಸ್ಸು ಕೊಟ್ಟರು, 1995ರಲ್ಲಿ ವಿಷಯ ಸಮಿತಿಯಲ್ಲಿ ಪ್ರಸ್ತಾಪ ಆದಾಗ ಆಶ್ವಾಸನೆ ಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ನಿಮ್ಮ ಹಣಕಾಸಿನ ಇಲಾಖೆ ಕೈಗಾರಿಕಾ ಇಲಾಖೆ ರೇಷ್ಮೆ ಇಲಾಖೆ ಎಲ್ಲಾ ಇಲಾಖೆಯ ಅಧಿಕಾರಿಗಳು ಇದ್ದು ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಇದಾದ ಮೇಲೆ ಎಷ್ಟುಸಾರಿ ವಿಧಾನ ಸಭೆಯಲ್ಲಿ ಪ್ರಸ್ತಾಪವಾಗಿದೆಯೆಂದರೆ, ತಾವೂ ಕೂಡ ಆಶ್ವಾಸನೆ ಕೊಟ್ಟಿದ್ದೀರಿ. ಅದೇ ರೀತಿಯಾಗಿ ಹಿಂದೆ ಸಚಿವರಾಗಿದ್ದ ನಾಗರಾಜಯ್ಯನವರೂ ಆಶ್ವಾಸನೆ ಕೊಟ್ಟಿದ್ದಾರೆ. ನಿಮಗೆ ಕಳಕಳಿ ಇದೆ, ನಮಗೂ ಕೂಡ ಅರ್ಥವಾಗುತ್ತದೆ. ಆದರೆ, ಬಂದಿರುವ ತೊಂದರೆಯೇನೆಂದರೆ, ಇವತ್ತು ನೀವು ಹಣಕಾಸಿನ ಇಲಾಖೆಯ ಅಧಿಕಾರಿಗಳನ್ನು ಕನ್‌ವೀನ್ಸ್ ಮಾಡುವುದಕ್ಕೆ ಆಗದೇ ಇರುವ ಕಾರಣದಿಂದ, ಇವತ್ತು ಈ ಪರಿಸ್ಥಿತಿ ಬಂದಿದೆ ಬಹುಶಃ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನ್ನು ಕನ್ವಿನ್ಸ್ ಮಾಡತಕ್ಕಂಥ ಜವಾಬ್ದಾರಿ ತಮ್ಮದೇ ಆಗಿರುತ್ತದೆ. ಆದ್ದರಿಂದ, ಈ ಬಗ್ಗೆ ಮತ್ತೆ ಪರಿಶೀಲನೆ ಮಾಡುತ್ತೇವೆಂದು ದಯಮಾಡಿ ಹೇಳಬೇಡಿ. ಈ ಬಗ್ಗೆ ಒಂದು ಪತ್ರವನ್ನು ಮಾನ್ಯ ಅಧ್ಯಕ್ಷರಿಗೂ ಬರೆದಿದ್ದೇನೆ. ಈ ವಿಷಯದಲ್ಲಿ ಇದೇ ಸದನದಲ್ಲಿ 5 ಬಾರಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಎಲ್ಲಾ ಸಂಧರ್ಬದಲ್ಲೂ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕೇ ಏನಾದರೂ ಕೊನೆ ಇದೆಯೋ? ಈಗ ಕೊಟ್ಟಿರತಕ್ಕಂಥ ಉತ್ತರದಲ್ಲೂ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಅದು ಯಾವೊತ್ತು ಕೊನೆಗೊಳ್ಳುವುದು? ಕಾರ್ಮಿಕರ ಹಿತದೃಷ್ಟಿಗಿಂತಾ ಹೆಚ್ಚಾಗಿ ಇದು ರೈತರ ಹಿತದೃಷ್ಟಿಗೆ ಸಂಬಂಧಪಟ್ಟದ್ದಾಗಿದೆ. ಹಣಕಾಸಿನ ಸಚಿವರೂ ಕೂಡ ಮೈಸೂರು ಜಿಲ್ಲೆಯವರೇ ಆಗಿದ್ದುಕೊಂಡು ಅವರಿಗೆ ಸಹಾಯ ಮಾಡದಿದ್ದರೆ ಹೇಗೆ? ಮಾನ್ಯ ಧ್ಯಕ್ಷರೆ, ಪರಿಶೀಲನೆ ಮಾಡುತ್ತಿದ್ದೇವೆಂದು ಐದಾರು ಸಾರಿ ಹೇಳುವುದಾದರೆ it becomes

contempt of the House.. ಎಂದು ನಾನು ಹೇಳಬೇಕಾಗುತ್ತದೆ. ಇಂಥಾ ದೊಡ್ಡ ಅಪರಾಧ ಅವರಿಂದ ಆಗಿದೆಯೆಂದು ನಾನು ಹೇಳಬೇಕಾಗಿದೆ. 5 ಸಾರಿ ಈ ಪ್ರಶ್ನೆ ಬಂದಾಗಲೂ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ಇದರಲ್ಲಿ ರೇಷ್ಮೆ ಇಲಾಖೆಯವರ ತಪ್ಪಿಲ್ಲ. ಇದರಲ್ಲಿ ಫೈನಾನ್ಸ್ ಡಿಪಾರ್ಟ್‌ಮೆಂಟಿನವರ ಪ್ರಾಬ್ಲಮ್ ಇದೆ. ಹಿಂದೆ 2200 ಕಾರ್ಮಿಕರು ಇದ್ದ, ಕಡೆ ಈಗ 300 ಕಾರ್ಮಿಕರು ಇದ್ದಾರೆ.

ಶ್ರೀ ಜೆ.ಹೆಚ್. ಪಾಟೀಲ್: ಎಲ್ಲಾ ಕೆಲಸಗಳನ್ನು ಪರಿಶೀಲನೆ ಮಾಡುತ್ತಿರುತ್ತೇವೆ. ಅದರ ಬಗ್ಗೆ ಏನೂ ತೀರ್ಮಾನ ತೆಗೆದುಕೊಂಡಿರುವುದಿಲ್ಲ. ಪರಿಶೀಲಿಸುತ್ತೇವೆಂದು ಹೇಳಿದ್ದೇವೆ ಅದನ್ನೇ ಪುನಃ ಪುನಃ ಕೇಳಿದರೆ ನಾವು ಏನು ಹೇಳಬೇಕಾಗುತ್ತದೆ?

ಅಧ್ಯಕ್ಷರು: ಒಂದು ಸ್ಟೇಜ್ ಇಂಪ್ರೂವ್ ಮಾಡಿಕೊಳ್ಳಿ. Now you improve it by one stage. It has been under consideration all these days. Now make it active consideration.

ಶ್ರೀ ಎಂ. ವರದೇಗೌಡ: ಸನ್ಮಾನ್ಯ ಅಧ್ಯಕ್ಷರೆ, ರೈತರುಗಳಿಗೆ ಸ್ಥಿರೀಕರಣ ಬೆಲೆ ಸಿಗಬೇಕಾದರೆ, ಈ ಫಿಲೇಚರ್‌ಗಳನ್ನು ಉಳಿಸಿಕೊಳ್ಳಬೇಕು. ಖಾಸಗಿಯವರು ಸ್ಟ್ರೈಕ್ ಮಾಡಿದಂಥ ಸಂದರ್ಭದಲ್ಲಿ ಇಂಥಾ ಫಿಲೇಚರ್‌ಗಳು ಅತಿ ಮುಖ್ಯವಾಗಿ ಬೇಕಾಗಿರುತ್ತವೆ. ನಿನ್ನೆ ದಿವಸ ಕೂಡಾ ನಾನು ಮಾನ್ಯ ಆರ್ಥಿಕ ಮಂತ್ರಿಗಳ ಜೊತೆಗೆ ಮಾತನಾಡಿ 30 ಬೇಸಿನ್‌ಗಳಲ್ಲಾದರೂ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ಕೆಲಸ ಪ್ರಾರಂಭ ಮಾಡಲು ಹಣ ಬಿಡುಗಡೆ ಮಾಡಬೇಕೆಂದು ಹೇಳಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್: ಹೌಸ್ ಆಫ್ ಕಾಮನ್ಸ್‌ದು ಒಂದು ಇನ್ಸಿಡೆಂಟ್ ಹೇಳುತ್ತನೆ. ಒಬ್ಬ ಮಿನಿಸ್ಟರ್ ಕನ್ಸಿಡರೇಷನ್ ಅಂಡರ್ ಕನ್ಸಿಡರೇಷನ್ ಎಂದು ಮೂರ್ನಾಲ್ಕು ಸಾರಿ ಬರೆದುಕೊಟ್ಟು ಬಿಡುತ್ತಾನೆ. ಸಂಬಂಧಪಟ್ಟ ಸೆಕ್ರೆಟರಿ ಆರನೇ ಸಾರಿಯೇ 7ನೇ ಸಾರಿಯೋ ಅಂಡರ್ ಆಕ್ಟಿವ್ ಕನ್ಸಿಡರೇಷನ್ ಎಂದು ಹೇಳುತ್ತಾನೆ. ಆ ಮಿನಿಸ್ಟರ್ ಕೇಳುತ್ತಾನೆ, What is the difference? ಬರೀ ಅಂಡರ್ ಕನ್ಸಿಡರೇಷನ್ ಅಂದರೆ, 'ಫೈಲ್ ಇಲ್ಲ ಅಂಥ' ಅಂಡರ್ ಆಕ್ಟಿವಿ ಕನ್ಸಿಡರೇಷನ್ ಎಂದರೆ 'ಫೈಲ್ ಇದೆ ಅಂಥ'

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿನ್ನೆಯವರೆಗೂ ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. ಇನ್ನು ಮುಂದೆ ಪರಿಶೀಲಿಸಲಾಗುವುದೆಂದು ಹೇಳಲಿ.

ಅಧ್ಯಕ್ಷರು: ಮಾನ್ಯ ಜಯಚಂದ್ರ ಅವರು ನನ್ನನ್ನೂ ಭೇಟಿಯಾಗಿ ಈ ಬಗ್ಗೆ ಲೆಟರನ್ನು ಕೊಟ್ಟಿದ್ದರು. ಅದರ ಬಗ್ಗೆ ನಾನೂ ಒಂದು ಪತ್ರವನ್ನು ಅವರಿಗೆ ಬರೆದಿದ್ದೆ.

ಶ್ರೀ ಎಂ. ವರದೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರನ್ನು ನನ್ನ ಕೊಠಡಿಗೆ ಕರೆದು ಸಮನ್ವಯ ಸಮಿತಿಯಲ್ಲಿ ಚರ್ಚೆ ಮಾಡಿದ್ದೇನೆ. ಅವುಗಳನ್ನು ಮುಚ್ಚಲಿಕ್ಕೆ ಬಿಡುವುದಿಲ್ಲ. ಏನೇ ಆದರೂ ಅವುಗಳನ್ನು ನಡೆಸತಕ್ಕಂಥ ವ್ಯವಸ್ಥೆ ಮಾಡುತ್ತೇವೆ.

Mr. SPEAKER:- He has been puttingfroth earnest efforts. There was some difficulty. He has made his intentions clear. ಅವರು ಉದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನೂ ಕೂಡ ತಮ್ಮ ಹತ್ತಿರ ಬಂದು ಚರ್ಚೆ ಮಾಡಿ, ಕಾಗದ ಕೂಡ ಬರೆದಿದ್ದೆ. ಅದಕ್ಕೆ ತಾವೂ ಕೂಡಾ ನನಗೆ ಕಾಗದ ಬರೆದು ಅವರಿಗೂ ಬರೆದಿದ್ದೀರಿ. ಇಷ್ಟೆಲ್ಲಾ ಆದರೂ ಇನ್ನೂ ಕನ್ಸಿಡರೇಷನ್‌ಗೆ ಬರಲಿಲ್ಲವೆಂಗರೆ ನಾನು ಏನಂತ ಹೇಳಬೇಕು? ಇದರಿಂದ ನನಗೆ ಏನೂ ತೊಂದರೆಯಾಗುವುದಿಲ್ಲ. ರೈತರುಗಳು ರೇಷ್ಮೆ ಗೂಡನ್ನು ಮಾರಲು ಮಾರ್ಕೆಟ್‌ಗೆ ತೆಗೆದುಕೊಂಡು ಹೋದಾಗ, ಅಲ್ಲಿ ಫಿಲೇಚರ್ಸ್ ಕೊಳ್ಳುವುದಕ್ಕೆ ಬರಲಿಲ್ಲವೆಂದರೆ, ಬೆಲೆ ಮೇಲಕ್ಕೆ ಹೋಗುವುದೇ ಇಲ್ಲ. ಫಿಲೇಚರ್ಸ್ ಹೋದರೆ ಕನಿಷ್ಟ 200 ರೂಪಾಯಿಗಳಷ್ಟು ಬೆಲೆ ಹೆಚ್ಚು ಬರುತ್ತದೆ. ಆ ಉದ್ದೇಶಕ್ಕೋಸ್ಕರವೇ ಇವತ್ತು ಫಿಲೇಚರ್ಸ್‌ನ್ನು ಇಟ್ಟುಕೊಂಡಿರತಕ್ಕಂಥಾದ್ದು. ಇದಕ್ಕೆ ಮಾನ್ಯ ಮಂತ್ರಿಯವರು ಪ್ರಯತ್ನ ಮಾಡಿದ್ದಾರೆ, ಆದರೆ ಇದರ ಬಗ್ಗೆ ಫೈನಾನ್ಸ್ ಡಿಪಾರ್ಟ್‌ಮೆಂಟಿನ ಡೆಪ್ಯೂಟಿ ಸೆಕ್ರೆಟರಿಯನ್ನು ಕನ್ವಿನ್ಸ್ ಮಾಡುವುದಕ್ಕಾಗುತ್ತಿಲ್ಲ. ಒಬ್ಬ ಡೆಪ್ಯೂಟಿ ಸೆಕ್ರೆಟರಿ ಕೊಕ್ಕೆ ಹಾಕಿ ಕಳುಹಿಸಿದರೆ ಅದು ಮುಗಿದು ಹೋದ ಹಾಗೆ. ಮತ್ತೆ ಇನ್ನು ಎರಡು ವರ್ಷ ಬೇಕು.

ಅಧ್ಯಕ್ಷರು: ಇದರ ಬಗ್ಗೆ ನಾನು ಹೇಳುತ್ತೇನೆ, ಗೌರ್ನೆನ್ಸ್ ಹೇಗೆಂದರೆ, ಇದೊಂದು ಜಾಯಿಂಟ್ ಫ್ಯಾಮಿಲಿ ಇದ್ದ ಹಾಗೆ. ಒಬ್ಬರು ಸಂಪಾದನೆ ಮಾಡುವವರು, ಒಬ್ಬರು ಖರ್ಚು ಮಾಡುವವರು, ಒಬ್ಬರು ಕುಳಿತುಕೊಂಡು ತಿನ್ನುವವರು, ಪಾಪ, ಒಬ್ಬರು ಕಷ್ಟ ಪಡುತ್ತಾರೆ ಅವರು ತಿನ್ನುವುದೇ ಇಲ್ಲ. ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಹಾಗೇ ಇರಬೇಕು, ನಾವು ಹೀಗೆ ಇರಬೇಕು. ಹಾಗಿದ್ದರೇನೇ ಸರ್ಕಾರ ನಡೆಯುವುದು. ಇಲ್ಲದೆ ಹೋದರೆ ಟ್ರಜರಿಯಲ್ಲಿ ದುಡ್ಡೇ ಉಳಿಯುವುದಿಲ್ಲ.

ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈಗಾಗಲೇ 28 ಕೋಟಿ ರೂಪಾಯಿಗಳ ಒಂದು ನಿಧಿ ಇದೆ. ಆ ಯೋಜನೆಗೋಸ್ಕರ ಇರುವ ಹಣದಲ್ಲಿ ಇವರು ಒಂದು ಫೈಸೆ ಖರ್ಚು ಮಾಡುತ್ತಿಲ್ಲ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಈ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಮನಸ್ಸು ಸಚಿವರಿಗೆ ಇದ್ದರೆ, ಫೈನಾನ್ಸ್ ಡಿಪಾರ್ಟ್‌ಮೆಂಟಿನವರನ್ನು ಮತ್ತು ಸಂಬಂಧಪಟ್ಟ ಇಲಾಖೆಯವರನ್ನು ಒಂದು ಮೀಟಿಂಗ್‌ಗೆ ಕರೆದು, ಅಲ್ಲೇ ಪ್ರೊಸೀಡಿಂಗ್ಸ್ ಮಾಡಿದರೆ ಈ ಪ್ರಾಬ್ಲಮ್ ಸಾಲ್ವ್ ಆಗುತ್ತದೆ. ಅದು ಬಿಟ್ಟು ಬರೀ ಫೈಲ್ ಕಳುಹಿಸುವುದರಿಂದ ನಿಧಾನವಾಗುತ್ತದೆ. ಮೀಟಿಂಗ್ ಮಾಡಿ ಪ್ರೊಸೀಡಿಂಗ್ಸ್ ಮಾಡಿದರೆ ಅವರಿಗೂ ಒಂದು ಬೈಂಡಿಂಗ್ ಇರುತ್ತದೆ.

ಅಧ್ಯಕ್ಷರು: ಇದು ಒಳ್ಳೆ ಸಲಹೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರು ತಿಳಿಸಿದ ಹಾಗೆ ಒಂದು ಸಮನ್ವಯ ಸಮಿತಿಯಲ್ಲಿ ಫೈನಾನ್ಸ್ ಡಿಪಾರ್ಟ್‌ಮೆಂಟ ಕಮಿಷನರ್, ಸಿರಿಕಲ್ಚರ್ ಡಿಪಾರ್ಟ್‌ಮೆಂಟ್ ಕಮಿಷನರ್ ಮತ್ತು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಕಮಿಷನರ್ ಒಟ್ಟಾರೆ

ಸೇರಿ ತೀರ್ಮಾನ ಮಾಡಿರತಕ್ಕಂಥ ವಿಷಯ ಕೂಡ ಇನ್ನೂ ಇಂಪ್ಲಿಮೆಂಟ್ ಆಗಲಿಲ್ಲವೆಂದರೆ ಹೇಗೆ? ಮಾರ್ಚ್ ತಿಂಗಳು ಬಂದರೆ ಉಳಿದ ಫ್ಯಾಕ್ಟರಿಗಳೂ ಮುಚ್ಚಿ ಹೋಗುತ್ತವೆ. ತಮ್ಮ ಕೊಠಡಿಯಲ್ಲಿ ಮೀಟಿಂಗ್ ಕರೆದರೆ ನಾನು ಬರುತ್ತೇನೆ. ಈಗ ಕೆಲಸ ಆಗದೇ ಇರುವುದರಿಂದ ನನ್ನ ವಾದದಲ್ಲಿ ಇದು ಕಂಟೆಮ್ಪ್ ಆಫ್ ದಿ ಹೌಸ್ ಆಗುತ್ತದೆಂದು ನನ್ನ ಅಭಿಪ್ರಾಯ. ಬೇಕಾದರೆ ತಮ್ಮ ಕೊಠಡಿಯಲ್ಲಿ ಮೀಟಿಂಗ್ ಕರೆದರೆ ಚರ್ಚೆ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ, ಇದರ ಬಗ್ಗೆ ಸಂಬಂಧಪಟ್ಟ ಇಲಾಖೆ ಕಾರ್ಯದರ್ಶಿಗಳು, ಹಣಕಾಸು ಇಲಾಖೆಯ ಕಾರ್ಯದರ್ಶಿಗಳು, ಕೈಗಾರಿಕಾ ಇಲಾಖೆ ಕಾರ್ಯದರ್ಶಿಗಳು ಜಂಟಿಯಾಗಿ ಸೇರಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಂಡಿರತಕ್ಕಂಥ ವಿಷಯವಾಗಿದೆ. ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಫಾರ್ಮಲ್ ಕನ್ಸರಂಟಿಗೆ ಇದು ಹೋಗಿರತಕ್ಕಂಥಾದ್ದು. ಫಾರ್ಮಲ್ ಕನ್ಸರೆನ್ಸ್‌ಗೆ ಹೋದ ಮೇಲೆ ಅದನ್ನು ಮಾಡಬೇಕಾಗಿತ್ತು. ಮೊದಲು ಅವರು ಜಾಯಿಂಟ್ ಕಮಿಟಿಯಲ್ಲಿ ಹಾಜರಾಗಿ ಒಪ್ಪಿಕೊಂಡ ಮೇಲೆ ಅದು ಆಗಬೇಕು. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅಂಡರ್ ಕನ್ಸಿಡರೇಷನ್ ಮತ್ತು ಆಕ್ಟಿವ್ ಕನ್ಸಿಡರೇಷನ್ ಎನ್ನುವ ಬಗ್ಗೆ ವ್ಯಾಖ್ಯಾನ ಹೇಳಿದ್ದಾರೆ.

ಅಧ್ಯಕ್ಷರು: ಶಿವಮೊಗ್ಗ ಜಿಲ್ಲೆಯವರ ಅವತಾರಗಳು ಏನೇನು ಇದೆಯೋ ನಮಗೆ ಗೊತ್ತೇ ಆಗುವುದಿಲ್ಲ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಮುಖ್ಯ ಮಂತ್ರಿಗಳನ್ನು ಕೆಣಕಬಾರದು, ಈಗಾಗಲೇ ಅವರು ಗಣಪತಿ ದೇವಸ್ಥಾನವನ್ನು ಉದ್ಘಾಟನೆ ಮಾಡಿ ಬಂದಿದ್ದಾರೆ. ಹನುಮಾನ್ ದೇವರ ಉದ್ಘಾಟನೆಯನ್ನೂ ಮಾಡಿ ಬಂದಿದ್ದಾರೆ. ಎರಡು ಬ್ರಹ್ಮಚಾರಿ ದೇವರುಗಳನ್ನೂ ಉದ್ಘಾಟನೆ ಮಾಡಿ ಬಂದಿದ್ದಾರೆ. ಆದ್ದರಿಂದ, ಅವರನ್ನು ಪದೇ ಪದೇ ಕೆಣಕುವುದಕ್ಕೆ ಹೋಗಬೇಡಿ.

ಅಧ್ಯಕ್ಷರು: ಇಷ್ಟು ದಿವಸ ಗಣಪತಿ ಮತ್ತು ಹನುಮಾನ್ ಅವರು ಕರೆಕ್ಟ್ ಆಗೇ ಇದ್ದರು, ನಾಳೆಯಿಂದ ಅವರ ಗತಿ ಏನಾಗುತ್ತದೆಯೋ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಏನಾದರೂ ಮಾಡಿಕೊಳ್ಳಿ ನಾನು ಹೋಗುತ್ತೇನೆಂದು, ಊರು ಸುಟ್ಟರು ಹನುಮಾನ್ ದೇವರು ಊರು ಹೊರಗೆ ಅನ್ನುವ ಹಾಗೆ ಅವರು ಆ ಕಡೆಯೇ ಹೋಗಿಬಿಟ್ಟರು, ಈ ಕಡೆ ಬರಲೇ ಇಲ್ಲ.

ಅಧ್ಯಕ್ಷರು: ನಾನು ಒಂದು ಕೆಲಸ ಮಾಡುತ್ತೇನೆ, I will request Hon'ble Minister to come. I will call the finance Department officeials,- ಜಾಯಿಂಟ್ ಮೀಟಿಂಗ್‌ನಲ್ಲಿ ಕನ್ಸರೆನ್ಸ್ ಕೊಟ್ಟಿದ್ದರೆ, ಫಾರ್ಮಲ್ ಕನ್‌ಕರೆನ್ಸಿಗೆ ಹೋದಾಗ, They have no business to withhold. I will talk to them, give me sometime, I will do it.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು, ಗಣಪತಿ ದೇವಸ್ಥಾನಕ್ಕೂ, ಆಂಜನೇಯನ ದೇವಸ್ಥಾನಕ್ಕೂ ಹೋಗಿರುವ ಬಗ್ಗೆ ಯಾವ ಸಂಬಂಧವನ್ನು ಏಕಲ್ಪಿಸುತ್ತಿದ್ದೀರಿ? ಎಲ್ಲರೂ ಹೋಗುವಾಗ ಅವರು ಹೋಗಿರುವುದರಲ್ಲಿ ವಿಶೇಷ ಏನಿದೆ? ಮುಖ್ಯ ಮಂತ್ರಿಗಳಾಗಿರುವುದರಿಂದ ಅವರನ್ನು ಕರೆದಿದ್ದಾರೆ, ಇವರು ಹೋಗಿದ್ದಾರೆ ಪೂಜೆ ಮಾಡಿದ್ದಾರೆ- ಬಂದಿದ್ದಾರೆ, ಅದರಲ್ಲಿ ವಿಶೇಷ ಏನಿದೆ?

ಅಧ್ಯಕ್ಷರು: ಇದರಲ್ಲಿ ವಿಶೇಷ ಮತ್ತು ವಿಶಿಷ್ಟ ಏನೂ ಇದೆ ಎಂದು ಹೇಳಲಿಲ್ಲ. ಗಣಪತಿ ಮತ್ತು ಹನುಮಂತ ಇದುವರೆಗೂ ಬ್ರಹ್ಮಚಾರಿಗಳಾಗಿದ್ದರು. ಇವರು ಅಲ್ಲಿಗೆ ಹೋಗಿ ಬಂದದ್ದರಿಂದ ನಾಳೆಯಿಂದ ಏನು ಪ್ರಭಾವ ಅಲ್ಲಿ ಬೀರುತ್ತದೆಯೋ ಅಂತ ನನಗೆ ಗೊತ್ತಿಲ್ಲ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್: ಮುಖ್ಯ ಮಂತ್ರಿಗಳನ್ನು ಬ್ರಹ್ಮಚಾರಿಗಳೆಂದು ಹೇಳುತ್ತಿರೋ ನೀವು?

ಅಧ್ಯಕ್ಷರು: ನನ್ನ ಬಾಯಿಯಲ್ಲಿ ಹೇಳಿಸುವುದು ಬೇಡ.

ಶ್ರೀ ಎಂ ಪಿ. ಪ್ರಕಾಶ್: ದೇವದಾಸಿಯರನ್ನು ಬಿಡುವಂಥ ಸಂದರ್ಭದಲ್ಲಿ ಹನುಮಪ್ಪ ದೇವರನ್ನೇ ಸಾಕ್ಷಿಯಾಗಿ ಮಾಡಿ ಮುದ್ರೆ ಒತ್ತಿಸುವುದು.

ಅಧ್ಯಕ್ಷರು: ಎಲ್ಲರಿಗೂ ಧನ್ಯವಾದಗಳು, ಈಗ ಸಭೆಯನ್ನು ಮುಂದೂಡಲಾಗಿದೆ. ಪುನಃ ದಿನಾಂಕ 24-2-97 ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಸದನವು ಸಮಾವೇಶಗೊಳ್ಳುತ್ತದೆ.

ಸದನವು ಸಂಜೆ 5-00 ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ 24ನೇ ಫೆಬ್ರವರಿ ಮಾಹೆ 1997ರ ಸೋಮವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು.